ಪಿಡಬ್ಲೂ.1                                        ಓ.ಎಸ್ ಸಂಖ್ಯೆಃ 658/2014

**ದಿಃ 14.08.2026 ರಂದು ಪಿಡಬ್ಲೂ-1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಟಿ ಆರ್ ಆರ್ ವಕೀಲರಿಂದಃ**

4. ನಿಪಿ-1 ಕ್ರಯದ ಕರಾರುಪತ್ರ ಆಗುವಾಗ ಮುನಿಯಪ್ಪ , ಚನ್ನಬಸಪ್ಪ , ಗೋಪಾಲ , ನಾಗರಾಜ ಅವರು ಇದ್ದರು. ಗೋಪಾಲ ಮತ್ತು ಲಕ್ಷ್ಮಣ ಎಂಬುವವರು ನಿಪಿ-1 ಕ್ರಯದ ಕರಾರುಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದು ಸದರಿ ಪತ್ರ ನೊಂದಣಿ ಆಗುವಾಗ ಮುನಿಯಪ್ಪ ಮತ್ತು ಚನ್ನಬಸಪ್ಪ ಅವರು ಸಹಿ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ-1 ದಾಖಲೆಯನ್ನು ತೋರಿಸಿ ಅದರಲ್ಲಿ ಯಾರ ಯಾರ ಸಹಿಗಳು ಯಾವುದು ಎಂದು ಗುರುತಿಸಲು ಆಗುತ್ತದೆಯೆ ಎಂದು ಕೇಳಿದಾಗ ಸಾಕ್ಷಿ ಈಗ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆ ಆಗುವಾಗ ಪ್ರತಿವಾದಿಯ ಹೆಂಡತಿ ಶೋಭಾ ಅವರು ಬಂದಿರಲಿಲ್ಲ. ಪ್ರತಿವಾದಿಯು ಯಾವತ್ತು ನಿಪಿ-1 ದಾಖಲೆಯನ್ನು ನನಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಅನಕ್ಷರಸ್ಥರಾಗಿದ್ದು ಆದ್ದರಿಂದ ಅವರ ಜಾಗವನ್ನು ಕಬಳಿಸಿಕೊಳ್ಳಲು ನಾನು , ಮುನಿಯಪ್ಪ , ಚನ್ನಬಸಪ್ಪ , ಗೋಪಾಲ , ನಾಗರಾಜ ಇವರುಗಳು ಸೇರಿಕೊಂಡು ನಿಪಿ-1 ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸುಳ್ಳು. ಆದ್ದರಿಂದ ನಾನು ನಿಪಿ-1 ದಾಖಲೆಯಲ್ಲಿ ಗೋಪಾಲ ಮತ್ತು ಲಕ್ಷ್ಮಿಕಾಂತ ಅವರ ಸಹಿಯನ್ನು ಗುರುತಿಸಲು ಆಗಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸಾದಹಳ್ಳಿ ಕಡೆಯಿಂದ ದೇವನಹಳ್ಳಿ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಇದೆ ಎಂದರೆ ಸರಿ.

5. ನಾನು ಪ್ರತಿವಾದಿಗೆ ನೊಟೀಸ್ ನೀಡಿದ ನಂತರ ಪ್ರತಿವಾದಿಯು ಅದಕ್ಕೆ ಉತ್ತರ ನೀಡಿರುವ ವಿಚಾರ ನನಗೆ ಗೊತ್ತಿದೆ. ಸದರಿ ಪ್ರತ್ಯುತ್ತರದ ಪ್ಯಾರಾ ನಂ.4 ರಲ್ಲಿ 11,66,880/- ರೂಪಾಯಿಗಳಿಗೆ ಕರಾರು ಬರೆದುಕೊಟ್ಟಿರುವುದಾಗಿ ಹೇಳಿದ್ದಾರೆ ಎಂದರೆ ಸರಿ. ಸದರಿ ಪತ್ಯುತ್ತರಕ್ಕೆ ನಾನು ಮರು ಉತ್ತರವನ್ನು ನೀಡಿರುವುದಿಲ್ಲ. ಪ್ರತಿವಾದಿ ಮತ್ತು ಅವರ ಮನೆಯವರು ನನಗೆ ದಾವಾ ಸ್ವತ್ತಿಗೆ ಸಂಬಂಧಿಸಿ 11,66,880/-ರೂಪಾಯಿಗಳಿಗೆ ಕರಾರು ಬರೆದುಕೊಟ್ಟಿದರೆ ಹೊರತು 5,00,000/- ರೂಪಾಯಿಗಳಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಪತ್ಯುತ್ತರ ಕಳುಹಿಸಿದ ಒಂದು ವರ್ಷದವರೆಗು ನಾನು ಯಾವುದೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ನ್ಯಾಯಾಲಯದ ಶುಲ್ಕ ಪಾವತಿಸಲು ಹಣ ಇಲ್ಲದ ಕಾರಣ ನಾನು ತಕ್ಷಣ ದಾವೆ ಹೂಡಲಿಲ್ಲ ಎಂದರೆ ಸರಿಯಲ್ಲ.

6. ಸಾಕ್ಷಿಗೆ ಒಂದು ಅಸೆಸ್ಮೆಂಟ್ ರಿಜಿಸ್ಟರನ್ನು ಗುರುತಿಸಲಾಗಿ ಅದನ್ನು ನೋಡಿ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದು ಒಪ್ಪಿ ಕೊಂಡಿದ್ದರಿಂದ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಡಿಮ್ಯಾಂಡ್ ರಿಜಿಸ್ಟರನ್ನು ಗುರುತಿಸಲಾಗಿ ಅದನ್ನು ನೋಡಿ ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದು ಒಪ್ಪಿ ಕೊಂಡಿದ್ದರಿಂದ ನಿಡಿ-2 ಎಂದು ಗುರುತಿಸಲಾಯಿತು. ಪ್ರತಿವಾದಿ ಮತ್ತು ಅವರ ಹೆಂಡತಿ ಶೋಭಾ ಅವರು ದಿನಾಂಕ 01.10.2011 ರಂದು ದಾವಾ ಸ್ವತ್ತಿಗೆ ಸಂಬಂಧಿಸಿ 11,66,880/-ರೂಪಾಯಿಗಳಿಗೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪ್ರತಿವಾದಿಯ ಹೆಂಡತಿ ಶೋಭಾ , ಟಿ ಗೋಪಾಲಕೃಷ್ಣ ಮತ್ತು ಮುನಿಯಪ್ಪ ಅವರು ಹಾಜರಿದ್ದರು ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರಿನಂತೆ ಆರು ತಿಂಗಳ ಒಳಗಾಗಿ ಉಳಿಕೆ ಹಣ ನೀಡಿ ಕ್ರಯಪತ್ರ ಬರೆಸಿಕೊಳ್ಳುವುದಾಗಿ ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 01.10.2011 ರಂದು ದಾವಾ ಸ್ವತ್ತಿಗೆ ಸಂಬಂಧಿಸಿ ಖಾತೆ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ಬಳಿ ಉಳಿಕೆ ಹಣ ನೀಡಲು ಹಣ ಇಲ್ಲದ ಕಾರಣ ನಾನೇ ಕ್ರಯಪತ್ರವನ್ನು ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. 11,66,880/-ರೂಪಾಯಿಗಳಿಗೆ ಕ್ರಯದ ಕರಾರು ಆಗಿರುವ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-1 ದಾಖಲೆಯಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವವರನ್ನು ನ್ಯಾಯಾಲಯಕ್ಕೆ ಕರೆಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಪ್ರಯತ್ನ ಮಾಡುತ್ತೇನೆ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**